ಡಾ. ನಾಗತಿಹಳ್ಳಿ ಚಂದ್ರಶೇಖರ ಅವರ

# ಇಷ್ಟಕಾಮ್ಯ ಭಾವಸಂವಾದ



ಸಪ್ನ

50

Scanned by CamScanner

ಡಾ. ನಾಗತಿಹಳ್ಳಿ ಚಂದ್ರಶೇಖರ ಅವರ

# ಇಷ್ಟಕಾಮ್ಯ
# ಭಾವಸಂವಾದ

ಸಂಪಾದಕರು

ಡಾ. ಎನ್. ಕೆ. ಲೋಲಾಕ್ಷಿ

ಗುಬ್ಬಿಗೂಡು ರಮೇಶ್

ಡಾ. ವಿಜಯಕುಮಾರಿ ಎಸ್. ಕರಿಕಲ್

ಸತೀಶ್ ಆರ್.

ಡಾ. ರಾಮಚಂದ್ರಪ್ಪ ಜಿ.ಟಿ.

ಸಪ್ನ ಬುಕ್ ಹೌಸ್®

3ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು - 560 009

ದೂರವಾಣಿ : 40114455

Scanned by CamScanner

Dr. Nagathihalli Chandrashekar avara Ishtakaamya Bhaavasamvaadha : Edited by Dr. N. K. Lolakshi, Gubbigudu Ramesh, Dr. Vijayakumari S. Karikal, Satish R., Dr. Ramachandrappa G. T. published by Sapna Book House (P) Ltd., R.O. # 11, 3rd Main Road, Gandhinagar, Bengaluru - 9. Tel. : 40114455.

[K.B. 2366]

ISBN : 978-93-86381-73-6

ಹಕ್ಕುಗಳು : ಲೇಖಕರು

ಪ್ರಥಮ ಮುದ್ರಣ : ಮಾರ್ಚ್ 2017

| | |
|---|---|
| ಪುಟಗಳು : xiv + 246 + 8 (colour photos)=268 | ಪ್ರತಿಗಳ ಸಂಖ್ಯೆ : 1000 |
| ಬೆಲೆ : ₹ 175/- | Paper Used : 18.6 Kg D/D (70 gsm) N.S.L.W. Maplitho<br>Book Size : 1/8th Demy |

ಹಂಚಿಕೆದಾರರು : ಸಪ್ನ ಇನ್‌ಫೋವೇ ಪ್ರೈ. ಲಿ.
3ನೇ ಮಹಡಿ, 3ನೇ ಮುಖ್ಯರಸ್ತೆ
ಗಾಂಧಿನಗರ, ಬೆಂಗಳೂರು–560 009

ಅಕ್ಷರ ಜೋಡಣೆ
ಪ್ರಿಯಾ ಎನ್. ಶೆಣೈ

ರಕ್ಷಾಪುಟ ವಿನ್ಯಾಸ
ಶ್ರೀಪಾದ

ಮುದ್ರಣ
ಪ್ರಿಂಟೆಕ್ ಪ್ರಿಂಟರ್ಸ್

Scanned by CamScanner

ಇಷ್ಟಕಾಮ್ಯ ಸಿನಿಮಾದಲ್ಲಿ ಪ್ರೀತಿಯ ಲಕ್ಷಣ 211
ಅನಿಲ್‌ಕುಮಾರ್ ಬಿ.ಬಿ, ಸುನಿಲ್, ತೇಜಸ್ವಿನಿ

ಇಷ್ಟಕಾಮ್ಯ ಚಿತ್ರದಲ್ಲಿನ ಪ್ರಾದೇಶಿಕ ಭಾಷೆ, ಆಚರಣೆ, ಸಂಸ್ಕೃತಿಯ ಚಿತ್ರಣ 214
ರಂಗಪ್ಪ ಇ., ಪ್ರಿಯಾಂಕ ಕೆ. ನಾಯಕ್

ಇಷ್ಟಕಾಮ್ಯದಲ್ಲಿ ಭಾಷಾವೈವಿಧ್ಯತೆ, ಸಂಸ್ಕೃತಿ ವೈಶಿಷ್ಟ್ಯತೆ 218
ರಾಜೇಂದ್ರ ಡಿ. ಬಡಿಗೇರ್

'ಇಷ್ಟಕಾಮ್ಯ'ದ ವಿಶ್ಲೇಷಣೆ ಮತ್ತು ಪ್ರಸ್ತುತತೆ 221
ಡಾ. ಪುಟ್ಟಯ್ಯ ಕೀರ್ತಿಪುರ

ಸಾಹಿತ್ಯ ಮತ್ತು ಸಿನಿಮಾ ಸಂಬಂಧ : ನಾಗತಿಹಳ್ಳಿ ಚಂದ್ರಶೇಖರ್ ಅವರ ಅವಿನಾಭಾವ ಸಂಬಂಧ 224
ಡಾ. ಹೊಂಬಯ್ಯ ಹೊನ್ನಲಗೆರೆ

ಮೌಲ್ಯಗಳ ಹುಡುಕಾಟದ ಇಷ್ಟಕಾಮ್ಯ 228
ಡಾ. ವಿಜಯಕುಮಾರಿ ಎಸ್. ಕರಿಕಲ್

ಇಷ್ಟಕಾಮ್ಯ ಚಲನಚಿತ್ರದ ಒಂದು ನೋಟ 235
ಬಸವರಾಜು ಜೆಟ್ಟಿಹುಂಡಿ

ಇಷ್ಟಕಾಮ್ಯ : ಮಹಿಳಾ ಪ್ರತಿನಿಧೀಕರಣ 239
ಮಹದೇವ ನಾಯಕ, ಹೆಮ್ಮಿಗೆ

ನಾ ಮೆಚ್ಚಿದ ಇಷ್ಟಕಾಮ್ಯ 244
ವಿಜಯಲಕ್ಷ್ಮೀ

ಇಷ್ಟಕಾಮ್ಯ ಚಿತ್ರ ಕುಟುಂಬ

Scanned by CamScanner

# ಮೌಲ್ಯಗಳ ಹುಡುಕಾಟದ ಇಷ್ಟಕಾಮ್ಯ

– ಡಾ. ವಿಜಯಕುಮಾರಿ ಎಸ್. ಕರಿಕಲ್

ಅಮೇರಿಕಾ ಅಮೇರಿಕಾ, ಕೊಟ್ರೇಶಿ ಕನಸು, ಮಾತಾಡ್ ಮಾತಾಡ್ ಮಲ್ಲಿಗೆ ಎಂಬಂತಹ ಆದರ್ಶಪ್ರಾಯವಾದ ವಿಚಾರ ಪ್ರಚೋದನೆಗೆ ಈಡುಮಾಡುವಂತಹ ಚಲನಚಿತ್ರಗಳನ್ನು ಕನ್ನಡಿಗರಿಗೆ ನೀಡಿದ ನಿರ್ದೇಶಕ ನಾಗತಿಹಳ್ಳಿ ಚಂದ್ರಶೇಖರ್. ಅವರ ನಿರ್ದೇಶನದಲ್ಲಿ ಮೂಡಿಬಂದ ಚಿತ್ರ ಇಷ್ಟಕಾಮ್ಯ. ಕನ್ನಡ ಕಾದಂಬರಿಗಳನ್ನಾಧರಿಸಿ ಚಲನಚಿತ್ರಗಳನ್ನು ಮಾಡುವ ಪರಂಪರೆಯ ವಾರಸುದಾರರಾಗಿ ನಾಗತಿಹಳ್ಳಿ ಕಾಣಿಸುತ್ತಾರೆ. ಅವರ ನಿರ್ದೇಶನದ ಇಷ್ಟಕಾಮ್ಯ ಚಿತ್ರವೂ ಇದೇ ಹೆಸರಿನಲ್ಲಿ ದೊಡ್ಡೇರಿ ವೆಂಕಟಗಿರಿರಾವ್ ಅವರು ರಚಿಸಿದ ಕಾದಂಬರಿಯ ಎಳೆಯನ್ನು ಇಟ್ಟುಕೊಂಡು ರೂಪುಗೊಂಡಿದೆ. ಕಾದಂಬರಿಯ ಎಳೆಯನ್ನಿಟ್ಟುಕೊಂಡು ಎನ್ನುವ ಮಾತು ಉದ್ದೇಶಪೂರ್ವಕವಾಗಿ ಹೇಳಿದೆ. ಏಕೆಂದರೆ ಈ ಕಾದಂಬರಿ ರಚನೆಯಾದದ್ದು ಇಪ್ಪತ್ತನೇ ಶತಮಾನದ ಎಂಟನೇ ದಶಕದಲ್ಲಿ, ಸುಧಾ ವಾರಪತ್ರಿಕೆಯಲ್ಲಿ ಧಾರವಾಹಿ ರೂಪದಲ್ಲಿ ಪ್ರಕಟವಾಗಿ ಅನಂತರ ಕಾದಂಬರಿ ಕೃತಿರೂಪದಲ್ಲಿ ಹೊರಬಂದಿತು. ಅಂದರೆ ಇಂದಿಗೆ ಸರಿಸುಮಾರು 35 ರಿಂದ 40 ವರ್ಷಗಳ ಹಿಂದೆ ರಚನೆಯಾದ ಕಾದಂಬರಿ. ಅದನ್ನು ಪ್ರಸ್ತುತ ಸಂದರ್ಭಕ್ಕೆ ತಕ್ಕಂತೆ ಸಾಕಷ್ಟು ಹೊಸ ವಿಷಯಗಳನ್ನು ತುಂಬಿ ಪರಿಪುಷ್ಟಿಗೊಳಿಸುವ ಸಾಹಸ ಮಾಡಿದವರು ನಾಗತಿಹಳ್ಳಿ.

ಕೌಟುಂಬಿಕ ನೆಲೆಯಲ್ಲಿ ಕತೆಯ ಹರವು ಇದೆ ಎನ್ನುವಾಗಲೇ ಕುಟುಂಬ ವ್ಯವಸ್ಥೆಯನ್ನು ನಿರ್ದೇಶಕರು ಹೇಗೆ ನೋಡುತ್ತಾರೆಂಬುದು ಮುಖ್ಯವಾಗುತ್ತದೆ.



ಈ ಕತೆಯಲ್ಲಿ ತ್ರಿಕೋನ ಪ್ರೇಮದ ವಸ್ತುವಿದೆ. ಈ ತ್ರಿಕೋನ ಪ್ರೇಮವು ಬಹುಶಃ ಮಾನವ ಸಮಾಜದಲ್ಲಿ ಎಲ್ಲೆಡೆಯೂ ಕಾಣಬರುವ ಒಂದು ಸಾಮಾನ್ಯ ಸಂಗತಿಯೇ ಹೌದು. ವಿವಾಹ ಸಂಸ್ಥೆ ಪ್ರಬಲವಾದಷ್ಟೂ ಅದನ್ನು ಛಿದ್ರಗೊಳಿಸುವ ಮನಸ್ಥಿತಿಗಳೂ ಪ್ರಬಲವಾಗುತ್ತಿವೆ. ವಿವಾಹ ಸಂಬಂಧದಲ್ಲಿ ಹೊರಗಿನ ಸಂಬಂಧವೊಂದು ಪ್ರವೇಶಿಸುವ ಸಂದರ್ಭವು ತ್ರಿಕೋನ ಪ್ರೇಮದ ಕತೆಯಾಗುತ್ತದೆ. ಈ ಕತೆಯ ನಾಯಕ ಆಕರ್ಷ್ (ಇದು ಸಿನಿಮಾದಲ್ಲಿ ಬರುವ ಹೆಸರು) ಒಬ್ಬ ಆದರ್ಶವಾದಿ ವೈದ್ಯ. ತಂದೆತಾಯಿಗಳ ಮುದ್ದಿನ ಮಗ. ಮಗ ದೊಡ್ಡೂರಲ್ಲಿ ಪ್ರಾಕ್ಟೀಸ್ ಮಾಡಲೆಂಬ ಹಂಬಲ ತಂದೆ–ತಾಯಿಗಳದ್ದಾದರೆ, ತಾತ ಕಟ್ಟಿಸಿದ ನರ್ಸಿಂಗ್‌ಹೋಂ ಅನ್ನೇ ತನ್ನ ಕಾರ್ಯಕ್ಷೇತ್ರವನ್ನಾಗಿಸಿಕೊಂಡು ಹಳ್ಳಿಯ ಜನರ ಸೇವೆ ಮಾಡುವುದು ತನ್ನ ಗುರಿಯಾಗಿ ಮಾಡಿಕೊಂಡವನು. ಸುಂದರ ಸುಶೀಲ ಹಾಗೂ ಇನ್ನೊಬ್ಬರ ಕಷ್ಟಕ್ಕೆ ಮರುಗುವ, ರೋಗಿಗಳನ್ನು ಬಹಳ ಅಕ್ಕರೆಯಿಂದ ನೋಡಿಕೊಳ್ಳುವ ಡಾಕ್ಟರ್, ರೋಗಿಗಳನ್ನು ಅತ್ಯಂತ ಸಲಿಗೆಯಿಂದ ಮಾತನಾಡಿಸುವ ಮೂಲಕವೇ ಅವರ ಕಾಯಿಲೆಯಲ್ಲಿ ಅರ್ಧದಷ್ಟು ವಾಸಿಮಾಡುವ ಮನೋಭಾವದ ತರುಣ. ಮನೆಯಲ್ಲಿ ಅಡುಗೆ ಮಾಡಲು ಇದ್ದವನನ್ನು ತಮ್ಮನ ಹಾಗೆ ನೋಡಿಕೊಳ್ಳುವ ಬಾಂಧವ್ಯಗಳನ್ನು ಬೆಸೆದುಕೊಳ್ಳುವ ಸ್ವಭಾವದವನು. ಇವನ ಬಾಳಿನಲ್ಲಿ ಅಕಸ್ಮಾತಾಗಿ ಪ್ರವೇಶವಾದವಳು ಅಚ್ಚರಿ ಎನ್ನುವ ಹುಡುಗಿ. ಬಡವರ ಮನೆಯ ಹುಡುಗಿ, ತನ್ನ ನೌಕರಿಗೆ ಹೊರಟಾಗ ದಾರಿಯಲ್ಲಿ ಆ್ಯಕ್ಸಿಡೆಂಟ್ ಆಗಿ ಬೆಳ್ಳಕ್ಕಿ ನರ್ಸಿಂಗ್ ಹೋಂ ಸೇರುತ್ತಾಳೆ. ಈ ಆ್ಯಕ್ಸಿಡೆಂಟ್ ಮಾಡಿದ ನಾಯಕ ಆಕರ್ಷ್ ತಾನೇ ಅವಳನ್ನು ತನ್ನ ಆಸ್ಪತ್ರೆಗೆ ಕರೆತಂದು ಚಿಕಿತ್ಸೆ ನೀಡುತ್ತಾನೆ. ಕೈ ಮುರಿದುದರಿಂದ ತನ್ನ ಈ ಸ್ಥಿತಿಗೆ ಕಾರಣವಾದ ಡಾಕ್ಟರ್ ಮೇಲೆ ಅವಳಿಗೆ ಕೋಪವಿದೆ. ಆದರೆ ಡಾಕ್ಟರ್ ಆಕೆಯನ್ನು ಮಗುವಿನಂತೆ ನೋಡಿಕೊಳ್ಳುತ್ತಾನೆ.

ಆಕಾಶಕ್ಕೆ ಹಾರಬೇಕೆನ್ನುವ ಕನಸುಗಣ್ಣಿನ ಬಡಹುಡುಗಿ ಕೈಮುರಿದ ಕಾರಣದಿಂದ ಹತಾಶಳಾಗುತ್ತಾಳೆ. ಕೈಯ್ಯ ಗಾಯ ಮಾಯುವವರೆಗೂ ಆಸ್ಪತ್ರೆಯಲ್ಲೇ ಉಳಿದವಳು ನೌಕರಿಯನ್ನು ಕಳೆದುಕೊಂಡು ಬೀದಿಪಾಲಾಗುತ್ತಾಳೆ. ದುಡಿಯಲಾರದ ಅಣ್ಣ, ಮನೆಬಿಟ್ಟು ಹೋದ ತಂದೆ ಎಲ್ಲ ಭಾರ ಹೊರುವ ತಾಯಿಯ ಸ್ಥಿತಿಯಿಂದಾಗಿ ಆಕೆ ನೋವನ್ನನುಭವಿಸುತ್ತಾಳೆ. ತಾನು ಕೆಲಸ ಮಾಡುವ ಫ್ಯಾಕ್ಟರಿಯ ಯಜಮಾನಿಯ ಮೇಲೆ ಸೇಡು ತೀರಿಸಿಕೊಳ್ಳಬೇಕೆಂಬ ಭಾವ ಮನದಲ್ಲಿ ಬರುತ್ತದೆಯಾದರೂ ಬದುಕಿಗೆ ನೆಲೆ ಕಂಡುಕೊಳ್ಳುವುದು ಮುಖ್ಯವಾಗುತ್ತದೆ.

Scanned by CamScanner